# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಭಟ್ಕಳ

**ಸಿ.ಸಿ. ನಂ. 1776/2025**

**ಸಿ.ಡಬ್ಲ್ಯೂಃ1, ಪಿ.ಡಬ್ಲ್ಯೂಃ 1**

| | | |
|---|---|---|
| **ಸಾಕ್ಷಿದಾರರ ಹೆಸರು** | : | ರಜನಿಕಾಂತ ಜನಾರ್ಧನ ನಾಯ್ಕ |
| **ತಂದೆಯ ಹೆಸರು** | : | ಜನಾರ್ಧನ ನಾಯ್ಕ |
| **ವಯಸ್ಸು** | : | 41 ವರ್ಷ |
| **ಉದ್ಯೋಗ** | : | ಖಾಸಗಿ ಕೆಲಸ |
| **ವಾಸ** | : | ಮುರ್ಡೇಶ್ವರ |

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ 25–10–2025**

**ಮುಖ್ಯ ವಿಚಾರಣೆಃ ಎ.ಪಿ.ಪಿ. ಯವರಿಂದಃ–**

ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನಾನು ಗುರುತಿಸುತ್ತೇನೆ. ಮೃತ ರಾಜವಿ ಜನಾರ್ಧನ ನಾಯ್ಕ ರವರು ನನಗೆ ತಾಯಿ ಆಗಬೇಕು. ಚಾಸಾ–8 ರವರ ಪರಿಚಯ ನನಗೆ ಇರುತ್ತದೆ. ನನಗೆ ಚಾಸಾ–9 ರಿಂದ ಚಾಸಾ–11 ರವರ ಪರಿಚಯ ಇರುವುದಿಲ್ಲ.

ದಿನಾಂಕ 26.05.2025 ರಂದು ನಾನು ಮಧ್ಯಾಹ್ನ 1.00 ಗಂಟೆಯ ಸುಮಾರಿಗೆ ವಿ ಎಸ್ ಎಸ್ ಸಂಘದಲ್ಲಿ ಕೆಲಸದಲ್ಲಿದ್ದಾಗ ಚಾಸಾ–8 ರವರು ನನಗೆ ಫೋನ್ ಮಾಡಿ ನಿಮ್ಮ ತಾಯಿ ಬಸ್ತಿ ಪಂಚಾಯತಿ ಕ್ರಾಸ್ ನಲ್ಲಿ ಗಾಯಗೊಂಡಿರುತ್ತಾರೆ ಎಂದು ತಿಳಿಸಿದರು. ತಕ್ಷಣ ನಾನು ಆರ್ ಎನ್ ಎಸ್ ಆಸ್ಪತ್ರೆಗೆ ಭೇಟಿ ನೀಡಿದೆನು. ಆಗ ಸದ್ರಿ ಆಸ್ಪತ್ರೆಯ ವೈದ್ಯರು ಹೆಚ್ಚಿನ ಚಿಕಿತ್ಸೆಗಾಗಿ ಬೇರೆ ಆಸ್ಪತ್ರೆಗೆ ಕರೆದುಕೊಂಡು ಹೋಗಲು ತಿಳಿಸಿದರು. ಅದರಂತೆ ನಾನು ಗಾಯಾಳು ನನ್ನ ತಾಯಿಯನ್ನು ಉಡುಪಿಯ ಜಿಲ್ಲಾ ಆಸ್ಪತ್ರೆಗೆ ತೆಗೆದುಕೊಂಡು ಹೋದೆನು. ಸದ್ರಿ ಜಿಲ್ಲಾ ಆಸ್ಪತ್ರೆಯ ವೈದ್ಯರು ನನ್ನ ತಾಯಿ ಬದುಕುವುದು ಕಷ್ಟಸಾಧ್ಯ ಎಂದು ತಿಳಿಸಿದರು. ಸದ್ರಿ ಆಸ್ಪತ್ರೆಯ ವೈದ್ಯರು ದಿನಾಂಕ 11.06.2025 ರವರೆಗೆ ನನ್ನ ತಾಯಿಗೆ ಚಿಕಿತ್ಸೆ ನೀಡಿ, ಬದುಕುವುದು ಕಷ್ಟ ಎಂದು ಹೇಳಿ ಆಸ್ಪತ್ರೆಯಿಂದ ಮನೆಗೆ ತೆಗೆದುಕೊಂಡು ಹೋಗಲು ತಿಳಿಸಿದರು. ಅದರಂತೆ ನಾವು ನನ್ನ ತಾಯಿಯನ್ನು ಮನೆಗೆ ಕರೆದು ತಂದು ಆರೈಕೆ ಮಾಡುತ್ತಿದ್ದೆವು. ದಿನಾಂಕ 08.07.2025 ರಂದು ನನ್ನ ತಾಯಿ ಮೃತಹೊಂದಿದರು.

ಚಾಸಾ–8 ರವರನ್ನು ಅಪಘಾತ ಹೇಗೆ ಆಯಿತು ಎಂದು ವಿಚಾರಿಸಿದಾಗ, ಮೃತ ನನ್ನ ತಾಯಿ ಬಸ್ತಿ ಪಂಚಾಯತಿ ಕ್ರಾಸ್ ನ ಹತ್ತಿರ ಪೂರ್ವದಿಂದ ಪಶ್ಚಿಮ ದಿಕ್ಕಿಗೆ ರಸ್ತೆ ದಾಟುತ್ತಿದ್ದಾಗ ಕೆ ಎಸ್ ಆರ್ ಟಿ ಸಿ ಬಸ್ಸ ವೇಗವಾಗಿ ಬಂದು ಡಿಕ್ಕಿಪಡಿಸಿರುತ್ತದೆ ಎಂದು ತಿಳಿಸಿರುತ್ತಾರೆ. ಡಿಕ್ಕಿಪಡಿಸಿದ ಕೆ ಎಸ್ ಆರ್ ಟಿ ಸಿ ಬಸ್ಸ ನಂತರ ಕೆಎ–31–ಎಫ್–1356 ಆಗಿರುತ್ತದೆ. ನನ್ನ ತಾಯಿಗೆ ತಲೆಗೆ ಮತ್ತು ಕೈಗೆ ಬಲವಾದ ಪೆಟ್ಟು ಬಿದ್ದಿತ್ತು. ಆ ಬಗ್ಗೆ ನಾನು ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿರುತ್ತೇನೆ. ನಾನು ದಾಖಲಿಸಿದ ದೂರನ್ನು ನೋಡುತ್ತಿದ್ದು ಅದನ್ನು ನಿಪಿ–1 ಎಂದು, ಸಾಕ್ಷಿಯ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ಅಪಘಾತವು ಮಧ್ಯಾಹ್ನ 12.45 ಗಂಟೆಗೆ ಆಗಿರುತ್ತದೆ ಎಂದು ಚಾಸಾ–8 ರವರು ನನಗೆ ತಿಳಿಸಿರುತ್ತಾರೆ. ನಾನು ದಿನಾಂಕ 08.07.2025 ರಂದು ಪೊಲೀಸರಿಗೆ ಮರು ಹೇಳಿಕೆ ನೀಡಿರುತ್ತೇನೆ.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಎಪಿಪಿಯವರಿಂದಃ**

ಅಪಘಾತವು ಮಧ್ಯಾಹ್ನ 12.30 ಗಂಟೆಗೆ ಆಗಿದೆ ಎಂದು ಚಾಸಾ–8 ರವರು ನನಗೆ ಫೋನ್ ಮುಖಾಂತರ ತಿಳಿಸಿದ್ದರು ಎಂದರೆ ನನಗೆ ನೆನಪಿಲ್ಲ. ಅಪಘಾತ ಆದ ತಕ್ಷಣ ನಾನು ಮತ್ತು ಚಾಸಾ–12 ರವರು ಆರ್ ಎನ್ ಎಸ್ ಆಸ್ಪತ್ರೆಗೆ ಹೋಗಿ ಅಲ್ಲಿಂದ ಖಾಸಗಿ ಅಂಬ್ಯುಲೆನ್ಸ ನಲ್ಲಿ ಉಡುಪಿ ಜಿಲ್ಲಾ ಆಸ್ಪತ್ರೆಗೆ ಹೋಗಿರುತ್ತೇವೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ.ಹೆಚ್.ಎನ್. ವಕೀಲರಿಂದಃ**

ನಾನು 10 ನೇ ತರಗತಿಯವರೆಗೆ ಓದಿರುತ್ತೇನೆ. ಅಪಘಾತ ಆದ ಸ್ಥಳದಿಂದ ಆರ್ ಎನ್ ಎಸ್ ಆಸ್ಪತ್ರೆ ಎರಡು ಕಿ.ಮೀ ಅಂತರ ಆಗುತ್ತದೆ. ಆರ್ ಎನ್ ಎಸ್ ಆಸ್ಪತ್ರೆ ಒಂದು ಸಾಧಾರಣ ಸುಸಜ್ಜಿತ ಆಸ್ಪತ್ರೆ ಎಂದರೆ ಸರಿ. ಫಿರ್ಯಾದಿಯನ್ನು ಪೊಲೀಸ್ ಠಾಣೆಯಲ್ಲಿ ಕುಳಿತು ಟೈಪ್ ಮಾಡಲಾಗಿದೆ. ಅಪಘಾತವನ್ನು ನಾನು ಕಣ್ಣಾರೆ ನೋಡದೇ ಇರುವುದರಿಂದ ಅಪಘಾತ ಹೇಗೆ ಮತ್ತು ಯಾರ ತಪ್ಪಿನಿಂದ ಆಯಿತು ಎಂದು ನನಗೆ ಹೇಳಲು ಬರುವುದಿಲ್ಲ. ಇದನ್ನು ನಾನು ಪೊಲೀಸರಿಗೆ ಹೇಳಿರುತ್ತೇನೆ. ಫಿರ್ಯಾದಿಯಲ್ಲಿ ಹೇಳಿರುವ ಎಲ್ಲ ವಿಷಯ ಪೊಲೀಸರೇ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತವು ನನ್ನ ತಾಯಿ ಹಠಾತ್ತಾಗಿ ರಸ್ತೆ ದಾಟುತ್ತಿದ್ದಾಗ ಅಪಘಾತ ಆಗಿದೆ ಎಂದು ಪೊಲೀಸರಿಗೆ ಹೇಳಿರುತ್ತೇನೆ. ಆರೋಪಿಯ ತಪ್ಪಿನಿಂದ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ.

ಪರಿಹಾರ ಕೋರಿ ಅರ್ಜಿ ಸಲ್ಲಿಸಿರುತ್ತೇವೆ. ಪರಿಹಾರ ಪಡೆಯುವುದಕ್ಕಾಗಿ ಆರೋಪಿಯ ತಪ್ಪಿನಿಂದ ಅಪಘಾತ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ತಪ್ಪಿನಿಂದ ಅಪಘಾತ ಆಗಿದೆ ಎಂದು ಹೇಳಲು ನನ್ನ ಬಳಿ ಯಾವುದೇ ಸರಿಯಾದ ಕಾರಣ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ – ಇಲ್ಲ.**

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಸಹಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ನ್ಯಾಯಾಲಯ ಭಟ್ಕಳ.**